ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ಹುದ್ದೆಗಳ ಬಗ್ಗೆ

1306 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯಲ್ಲಿ ಕಚೇರಿ ಅಧೀಕ್ಷಕರ ಮಂಜೂರಾತಿ ಹುದ್ದೆಗಳ ಸಂಖ್ಯೆ ಎಷ್ಟು?

ಆ) ಅವುಗಳನ್ನು ವರ್ಗ ಮತ್ತು ನೇಮಕಾತಿ ನಿಯಮದ ಪ್ರಕಾರ ಭರ್ತಿ ಮಾಡಲಾಗಿದೆಯೇ?

ಇ) ಇದುವರೆಗೂ ಬಡ್ತಿ ನೀಡಿರುವ ಸಂಖ್ಯೆ ಎಷ್ಟು? ಮಂಜೂರಾಗಿರುವುದಕ್ಕಿಂತಲೂ ಹೆಚ್ಚಾಗಿ ಬಡ್ತಿ ನೀಡಿದ್ದಲ್ಲಿ ಯಾವ ವರ್ಗ ಮತ್ತು ನೇಮಕಾತಿಯನ್ನು ಪಾಲಿಸಿ ಬಡ್ತಿ ನೀಡಲಾಗಿದೆ?

ಈ) ಬಡ್ತಿ ನೀಡಿರುವ ಬಗ್ಗೆ ನ್ಯಾಯಾಲಯದ ಯಾವುದಾದರೂ ತೀರ್ಪು ಬಂದಿದೆಯೇ, ಅದರನ್ವಯ ಏನಾದರೂ ಕ್ರಮ ಕೈಗೊಳ್ಳಲಾಗಿದೆಯೇ?

ಉ) ಮಂಜೂರಾತಿ ಸಂಖ್ಯೆಗಿಂತ ಹೆಚ್ಚಾಗಿ ಬಡ್ತಿ ನೀಡಿದಲ್ಲಿ ನೌಕರರ ಬಗ್ಗೆ ಕೈಗೊಳ್ಳಲಾಗಿರುವ ಕ್ರಮಗಳೇನು, ಅವರನ್ನು ಅಧೀಕ್ಷಕರ ಪದಕ್ರಮ ಪಟ್ಟಿಯಲ್ಲಿ ಸೇರಿಸಲಾಗಿದೆಯೇ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) 31 ಹುದ್ದೆಗಳು

ಆ) ಹೌದು

ಇ) ಇದುವರೆವಿಗೂ ಬಡ್ತಿ ನೀಡಿರುವ ಸಂಖ್ಯೆ 50 ಕರ್ನಾಟಕ ಆಡಳಿತ ವ್ಯಾಯ ಮಂಡಳಿಯ ಆದೇಶದಂತೆ ನೀಡಿರುವ ಬಡ್ತಿಯನ್ನು ಪುನರ್ ಪರಿಶೀಲಿಸುವಾಗ, ಹಿಂಬಡ್ತಿ ನೀಡದೆ ಸರ್ಕಾರದ ಸೂಚನೆಯಂತೆ ತಾತ್ಕಾಲಿಕವಾಗಿ ಬೇರೆ ಬೇರೆ ಇಲಾಖೆಗಳಲ್ಲಿ ಕಾರ್ಯನಿರ್ವಹಿಸಲು ಸೂಚಿಸಿರುವಂತೆ ನಿಯೋಜನೆಯ ಮೇರೆಗೆ ಕಾರ್ಯ ನಿರ್ವಹಿಸುತ್ತಿದ್ದಾರೆ.

ಈ) ಹೌದು, ನ್ಯಾಯಾಲಯವು ತೀರ್ಪು ನೀಡಿದ ಪ್ರಕಾರ ಅರ್ಹರಿರುವವರಿಗೆ ಬಡ್ತಿ ನೀಡಲಾಗಿದೆ.

ಉ) ಆಡಳಿತ ನ್ಯಾಯ ಮಂಡಳಿಯ ಆದೇಶದಂತೆ ಮುಂಬಡ್ತಿ ನೀಡಲಾಗಿದೆ. ಈಗಾಗಲೇ ಮುಂಬಡ್ತಿ ಹೊಂದಿರುವ ಅಂದರೆ ನ್ಯಾಯ ಮಂಡಳಿಯ ಆದೇಶದ ಪೂರ್ವದಲ್ಲಿ ಪ್ರಥಮ ದರ್ಜೆ ಸಹಾಯಕ ವೃಂದದಿಂದ ಬಡ್ತಿ ಹೊಂದಿದ್ದ ನೌಕರರನ್ನು ಹಿಂಬಡ್ತಿ ಮಾಡದೇ ತಾತ್ಕಾಲಿಕವಾಗಿ ನಿಯೋಜನೆ ಮೇರೆಗೆ ಬೇರೆ ಇಲಾಖೆಗೆ ನಿಯೋಜಿಸಲಾಗಿದೆ. ಸದರಿ ನೌಕರರನ್ನು ಪದಕ್ರಮ ಪಟ್ಟಿಯಲ್ಲಿ ಸೇರಿಸಿರುವುದಿಲ್ಲ.

International Air Port at Devanahalli

1033 - Shri N. Rajanna (Bharathinagara) : Will the Minister for Large & Medium Industries be pleased to state?

a) Whether the Govt. has taken up the construction of International airport at Devanahalli near Bangalore.

b) If so, Whether it will be constructed in joint venture.

c) Whether TATA's have been entrusted with the above work?

d) When it would be completed?

Sri R.V. Deshpande (Minister for large and Medium Industries.) :